**<u>ದಿನಾಂಕಃ 25-09-2023 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲುಃ ಶ್ರೀ ಎನ್.ಬಿ.ಬಿ. ವಕೀಲರಿಂದಃ 6 ರಿಂದ 10 ನೇ ಪ್ರತಿವಾದಿಯ ಪರಃ</u>**

ನಾನು ಖಾಸಗಿ ಶಾಲೆಯಲ್ಲಿ ಶಿಕ್ಷಕರಾಗಿರುತ್ತೇನೆ. ನನ್ನ ವಾದ ಪತ್ರದಲ್ಲಿ ಈ ರೀತಿ ನಾನು ಬರೆದಿರುವುದಿಲ್ಲ. ಹಾಲವ್ವ ಮತ್ತು ಕರಿಯಪ್ಪ ಗಂಡ ಹೆಂಡತಿ ಇರುತ್ತಾರೆ. ಅವರಲ್ಲಿ ಮೊದಲು ಕರಿಯಪ್ಪ ಮೃತಪಟ್ಟರು. 1990 ರಲ್ಲಿ ಕರಿಯಪ್ಪ ಮೃತಪಟ್ಟರು. ಮದುವೆಯಾದಾಗಿನಿಂದ ಅವರಿಬ್ಬರು ಒಂದೇ ಮನೆಯಲ್ಲಿ ವಾಸವಾಗಿದ್ದರು ಎಂದರೆ ನಿಜ. ಹಾಲವ್ವ ಯಾವುದೇ ಸರ್ಕಾರಿ ಕೆಲಸದಲ್ಲಿ ಇರಲಿಲ್ಲ. ಹಾಲವ್ವ ಮತ್ತು ಕರಿಯಪ್ಪಗೆ ಇಬ್ಬರು ಹೆಣ್ಣು ಮಕ್ಕಳು. ಅವರೆಂದರೆ ಹನುಮವ್ವ ಮತ್ತು ದ್ಯಾಮವ್ವ ಇರುತ್ತಾರೆ. ಕರಿಯಪ್ಪ ಮನೆಯ ಯಜಮಾನಿಕೆ ಮಾಡುತ್ತಿದ್ದ ಎಂದರೆ ಸಾಕ್ಷಿ ಗಂಡ ಹೆಂಡತಿ ಇಬ್ಬರು ಮಾಡುತ್ತಿದ್ದರು ಎಂದು ಹೇಳುತ್ತಾರೆ. ಹಣದ ವ್ಯವಹಾರವನ್ನು ಇಬ್ಬರೂ ಮಾಡುತ್ತಿದ್ದರು. ಹನುಮವ್ವ ಈಗ ಮೃತಪಟ್ಟಿರುತ್ತಾರೆ ಎಂದರೆ ನಿಜ. ಆಕೆಗೆ 4 ಜನ ಮಕ್ಕಳು ಅವರೆಂದರೆ- ಮೃತ ದುರ್ಗವ್ವ, ಕಾಮವ್ವ, ರತ್ನವ್ವ ಮತ್ತು ದಿಳ್ಳೆಪ್ಪ ಇರುತ್ತಾರೆ. ಇನ್ನೊಬ್ಬ ಮಗ ಕರಿಯಪ್ಪ ಮೃತಪಟ್ಟಿರುತ್ತಾರೆ. ಮೃತ ಕರಿಯಪ್ಪಗೆ ಮದುವೆಯಾಗಿತ್ತು. ಆತನ ಹೆಂಡತಿ ಸಾವಿತ್ರವ್ವ ಮಕ್ಕಳು ರವಿ ಮತ್ತು ಇನ್ನೊಬ್ಬರ ಹೆಸರು ಗೊತ್ತಿರುವುದಿಲ್ಲ. ಸಾವಿತ್ರವ್ವ ಮತ್ತು ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರನನ್ನಾಗಿ ಮಾಡಿರುವುದಿಲ್ಲ ಎಂದರೆ ನಿಜ. ಅವರ ಹಕ್ಕನ್ನು ಎತ್ತಿಹಾಕಬೇಕೆಂಬ ಉದ್ದೇಶದಿಂದ ಅವರನ್ನು ಪಕ್ಷಗಾರನನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯ ಸರ್ವೆ ನಂ. 30/1 ಬಿ ಇರುತ್ತದೆ. ಸದರಿ ಆಸ್ತಿಯನ್ನು 1972 ರಲ್ಲಿ ಕರಿಯಪ್ಪ ಆತನ ಹೆಂಡತಿ ಹೆಸರಿಗೆ ಖರೀದಿ ಹಿಡಿದಿದ್ದರು ಎಂದರೆ ಸರಿಯಲ್ಲ. ಕರಿಯಪ್ಪ ಮತ್ತು ಹಾಲವ್ವನ 2 ನೇ ಮಗಳ ಹೆಸರು ದ್ಯಾಮವ್ವ ಇರುತ್ತಾರೆ. ದ್ಯಾಮವ್ವ ನನ್ನ ತಾಯಿ ಇರುತ್ತಾರೆ. ದ್ಯಾಮವ್ವಗೆ 4 ಜನ ಗಂಡು ಮಕ್ಕಳು ಒಬ್ಬ ಹೆಣ್ಣು ಮಗಳು ಇರುತ್ತಾರೆ. ಅವರೆಂದರೆ- ದುರ್ಗಪ್ಪ ಉರ್ಫ್ ಮಲ್ಲಪ್ಪ, ಹನುಮಂತಪ್ಪ, ಕಂಡೆಪ್ಪ, ಹಿರಿಯವ್ವ ಮತ್ತು

ನಿಂಗಪ್ಪ ಇರುತ್ತಾರೆ. 1 ನೇ ಪ್ರತಿವಾದಿ ಸಿವಿಲ್ ನ್ಯಾಯಾಲಯದಲ್ಲಿ ಆಸ್ತಿಯ ಬಗ್ಗೆ ನನಗೂ ಮೃತ್ಯುಪತ್ರ ಆಗಿರುತ್ತದೆ ಎಂದು ವ್ಯಾಜ್ಯ ಮಾಡಿರುತ್ತಾರೆ ಎಂದರೆ ನಿಜ ಈ ದಾವೆಯಲ್ಲಿ ಹನುಮಂತಪ್ಪ ಹಾಜರಾಗಿರುತ್ತಾರೆ ಇಲ್ಲವೋ ಗೊತ್ತಿರುವುದಿಲ್ಲ. ನಾನು ಆ ದಾವೆಯಲ್ಲಿ ಹಾಜರಾಗಿರುವುದಿಲ್ಲ. ನಾನು ಇನ್ನೊಂದು ಮೃತ್ಯುಪತ್ರ ಹುಟ್ಟಿಸಿಕೊಂಡು ಈ ವ್ಯಾಜ್ಯ ಮಾಡಿ ನನ್ನ ದಾವೆಯಲ್ಲಿ 1 ನೇ ಪ್ರತಿವಾದಿ ಹಾಜರು ಆಗಿರುವುದಿಲ್ಲ, ಅವರ ದಾವೆಯಲ್ಲಿ ನಾನು ಹಾಜರಾಗಿರುವುದಿಲ್ಲ ಎಂದರೆ ಸರಿಯಲ್ಲ. ನನಗೂ ಮತ್ತು ನನ್ನ ಸಹೋದರರಿಗೂ ಖೊಟ್ಟಿ ಮೃತ್ಯುಪತ್ರ ಮಾಡುವ ಹವ್ಯಾಸ ಇದೆ ಎಂದರೆ ಸರಿಯಲ್ಲ. ಗ್ರಾಮ ಪಂಚಾಯತಿ ಆಸ್ತಿ ನಂ. 406/5 ರ ಉತಾರನ್ನು ನಾನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ. ಈ ಆಸ್ತಿಯ ಬಗ್ಗೆ ಯಾವುದೇ ಮೃತ್ಯು ಪತ್ರ ಆಗಿದೆ ಎಂದರೆ ಸರಿಯಲ್ಲ ಸದರಿ ಆಸ್ತಿ ಈಗ ಹಿರಿಯವ್ವ ಕೋಂ ರಾಮಪ್ಪ ಮಣಿಗಾರವರ ಹೆಸರಿಗೆ ಇರುತ್ತದೆ. ಈ ಆಸ್ತಿಯ ಬಗ್ಗೆ ಯಾವುದೇ ಮೃತ್ಯು ಪತ್ರ ಮಾಡದಿದ್ದರೂ ಅನಾವಶ್ಯಕವಾಗಿ ಹಾಜರು ಪಡಿಸಿರುತ್ತೇನೆ ಎಂದರೆ ಸರಿಯಲ್ಲ. ಈ ಆಸ್ತಿಯ ಬಗ್ಗೆ ಆದಂತಹ ಮೃತ್ಯುಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುತ್ತೇನೆ.

ದಿನಾಂಕಃ 13.01.2011 ರಂದು ಹಾಲವ್ವ ಮಾಡಿರುವ ಮೃತ್ಯುಪತ್ರ ರದ್ದು ಮಾಡಿರುತ್ತಾರೆ ಎಂದರೆ ನಿಜ. ಸಾಕ್ಷಿ ಸ್ವತಃ ಹೇಳುವುದೆನೆಂದರೆ ನನ್ನ ಅಣ್ಣ ಕಂಡೆಪ್ಪ ಬ್ಯಾಡಗಿ ಹಾಲವ್ವರಿಗೆ ಪೆನ್ಸನ್ ಹಣ ಮಾಡಿಸುತ್ತೇವೆ ಎಂದು ಹೇಳಿ ಸೃಷ್ಟಿ ಮಾಡಿದ್ದರಿಂದ ಮೃತ್ಯು ಪತ್ರವನ್ನು ರದ್ದು ಮಾಡಿರುತ್ತಾರೆ ಅದು ನೊಂದಾಯಿತವಾಗಿ ರದ್ದು ಆಗಿದೆ ಎಂದರೆ ನಿಜ. ಸ್ವತಃ ಹಾಲವ್ವ ಉಪನೊಂದಣಿ ಕಚೇರಿಯಲ್ಲಿ ಮೃತ್ಯು ಪತ್ರ ರದ್ದು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಹಾಲವ್ವ ಸ್ವತಃ ರದ್ದು ಮಾಡಿರುವುದಿಲ್ಲ. ಕಂಡೆಪ್ಪ ಪೆನ್ಸನ್ ಹಣ ಮಾಡಿಸುವುದಾಗಿ ಹೇಳಿ ರದ್ದು ಮಾಡಿಸಿರುವ ವಿಷಯ ಹಾಲವ್ವ ತೀರಿ 8 ತಿಂಗಳ ನಂತರ ನನಗೆ ವಿಷಯ ತಿಳಿದಿರುತ್ತದೆ. 2018 ರಲ್ಲಿ ಹಾಲವ್ವ ತೀರಿಕೊಂಡಿರುತ್ತಾರೆ. ಈ ರೀತಿ ರದ್ದು ಮಾಡಿರುವ ಬಗ್ಗೆ ನಾವು ವ್ಯಾಜ್ಯ ಮಾಡಿರುತ್ತೇವೆ.

**ಮುಂದುವರೆದ_ಪಾಟೀ_ಸವಾಲುಃ**

ಕೋರಿಕೆ ಮೇರೆಗೆ ಮುಂದೂಡಲಾಗಿದೆ.

(**ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**).

ಓ.ಹೇ.ಕೆ.ಸರಿ ಇದೆ.

**Sd/-**

ಹಿರಿಯ ದಿವಾಣಿ ನ್ಯಾಯಾಧೀಶರು

ಹಾಗೂ ಜೆ.ಎಂ.ಎಫ್.ಸಿ., ನ್ಯಾಯಾಲಯ ಬ್ಯಾಡಗಿ.